ಓ.ಎಸ್. 453/2013

ಪಿ.ಡಬ್ಲ್ಯೂ-1

ದಿನಾಂಕಃ **09.07.2025** ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಪಿ.ಡಿ.ಟಿ. ವಕೀಲರಿಂದಃ</u>

**1.** ನಳಿನಿ ಎಂಬುವವರು ನಿಮ್ಮ ವಿರುದ್ದ ಓ.ಎಸ್. 176/2006 ರಂತೆ ದಾವೆ ಹೂಡಿದ್ದರು ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ನಳಿನಿ ಎಂಬುವವರು ಹೂಡಿರುವುದಿಲ್ಲ ಆದರೆ ಮಲ್ಲಮ್ಮ ಎಂಬುವವರು ಹೂಡಿದ್ದರು ಎಂದು ಉತ್ತರಿಸಿರುತ್ತಾರೆ. ನಿಮ್ಮ ಗ್ರಾಮದಲ್ಲಿ ಹನುಮಂತಪ್ಪನ ಮಗ ಸಿ.ಹೆಚ್. ನರಸಿಂಹಮೂರ್ತಿ ಎಂದು ಯಾರಾದರೂ ಇರುತ್ತಾರೆಯೇ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. 3 ನೇ ಪ್ರತಿವಾದಿ ನಳಿನಿರವರು ನನ್ನ ವಿರುದ್ಧ ಯಾವುದೇ ದಾವೆ ಹೂಡಿರುವುದಿಲ್ಲ. ನಾನು 3 ನೇ ಪ್ರತಿವಾದಿಯ ವಿರುದ್ದ ಯಾವುದೇ ದಾವೆಯನ್ನು ಹೂಡಿರಲಿಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನಾನು ಈ ದಾವೆಯನ್ನು ಹೊರತು ಪಡಿಸಿ ಬೇರೆ ಯಾವುದೇ ಪ್ರಕರಣದಲ್ಲಿ ನ್ಯಾಯಾಲಯದಲ್ಲಿ ಸಾಕ್ಷ್ಯನುಡಿದಿರುವುದಿಲ್ಲ.

**2.** 3 ನೇ ಪ್ರತಿವಾದಿ ಹೂಡಿದ್ದದಂತಹ ಓ.ಎಸ್. 176/2006 ರಲ್ಲಿ ನಾನು ವಕೀಲರ ಮೂಲಕ ಹಾಜರಾಗಿ ಪ್ರಕರಣವನ್ನು ಮುಂದುವರೆಸಿದ್ದರೂ ಸಹ 3 ನೇ ಪ್ರತಿವಾದಿ ನನ್ನ ವಿರುದ್ದ ದಾವೆ ಹೂಡಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. 3 ನೇ ಪ್ರತಿವಾದಿ ಹೂಡಿದ್ದದಂತಹ ಓ.ಎಸ್. 176/2006 ರಲ್ಲಿ ನನ್ನ ವಿರುದ್ದ ದಾವೆ ಡಿಕ್ರಿಯಾಗಿದ್ದು, ಸದರಿ ಡಿಕ್ರಿಯ ವಿರುದ್ದ ಈ ಪ್ರಕರಣದಲ್ಲಿ ನನ್ನ ಪರವಾಗಿ ಹಾಜರಾಗಿರುವ ವಕೀಲರ ಮೂಲಕ ನಾನು ಯು.ಆರ್.ಎ. 39/2013 ರಂತೆ ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಮೇಲ್ಮನವಿಯನ್ನು ತಡವಾಗಿ ಸಲ್ಲಿಸಿರುತ್ತಾರೆಂದು ವಜಾ ಮಾಡಿರುತ್ತಾರೆ ಎಂದರೆ ಸರಿ. ಸದರಿ ಆದೇಶದ ವಿರುದ್ದ ನಾನು ಮಾನ್ಯ ಉಚ್ಛ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿರುವುದಿಲ್ಲ.

**3.** ಓ.ಎಸ್. 176/2006 ರಲ್ಲಿ ನಾನು ಹಾಜರು ಪಡಿಸಿದ್ದಂತಹ ದಾಖಲೆಗಳನ್ನೇ ಈ ದಾವೆಯಲ್ಲಿಯೂ ಸಹ ಹಾಜರು ಪಡಿಸಿರುತ್ತೇನೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ 1 ಮತ್ತು 2 ನೇ ಪ್ರತಿವಾದಿಗಳು ಕಟ್ಟಡ ಕಟ್ಟಿಕೊಂಡು ಬೇಕರಿ ನಡೆಸುತ್ತಿರುತ್ತಾರೆ ಎಂದರೆ ಸರಿ. ನಾನು ಮತ್ತು ಹನುಮಂತಪ್ಪ ಶಾಮೀಲಾಗಿ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಹಿಂದೆ ನ್ಯಾಯಾಲಯದಲ್ಲಿ ತೀರ್ಪು ಆಗಿದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಗೆ ಸೇರಿದಂತಹ ಆಸ್ತಿಗೆ ಸಂಬಂಧಿಸಿದಂತೆ ನಾವು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಈ ದಾವೆಯನ್ನು ಹೂಡಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ. ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿರುತ್ತಾರೆಂದು 2 ನೇ ಪ್ರತಿವಾದಿ ನನ್ನ , ಹನುಮಂತಪ್ಪ ಮತ್ತು ಪಂಚಾಯ್ತಿ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣ ವಿಚಾರಣಾ ಹಂತದಲ್ಲಿರುತ್ತದೆ ಎಂದರೆ ಸರಿ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ

ಪಿ.ಡಬ್ಲ್ಯೂಃ-1